



# ಕೂದಲೆಳೆಯಲ್ಲಿ ಕಲಾಕೃತಿ

ಪುಟ್ಟ ಅಕ್ಕಿ ಕಾಳಿನ ಮೇಲೆ ಬಗೆ ಬಗೆ ಅಕ್ಷರಗಳನ್ನು ಕೆತ್ತುವ, ಚಿತ್ರ ಬಿಡಿಸುವ ಕಲಾವಿದರನ್ನು ನೋಡಿದರೆ ನಮಗೆ ಅಚ್ಚರಿ ಎನಿಸುತ್ತದೆ. ಆದರೆ  ಜಿನ್ ಯಿನ್ ಹ್ವಾ ಎಂಬಾತನ ಮೈಕ್ರೊ ಕಾರ್ವಿಂಗ್ ಹಾಗೂ ಕೂದಲಲ್ಲಿ ಮಾಡಿರುವ ಪೇಂಟಿಂಗ್‌ಗಳನ್ನು ನೋಡಿದರೆ ಈ ಅಚ್ಚರಿ ಇಮ್ಮಡಿಸುತ್ತದೆ.

ಚೀನಾ ದೇಶದ ಜಿಯಾಂಗ್ಸು ಪ್ರಾಂತ್ಯದ ನ್ಯಾನ್ಟನ್ ಎಂಬ ಚಿಕ್ಕ ಊರಿನಲ್ಲಿ ಹುಟ್ಟಿ ಬೆಳೆದ ಜಿನ್, ಸಾಂಪ್ರದಾಯಿಕ ಚೀನೀ ಕಲೆಯೊಂದಿಗೆ ಹೊಸ ಬಗೆಯ ವಿಧಾನಗಳನ್ನು ತನ್ನ ಚಿತ್ರರಚನೆಯಲ್ಲಿ ಅಳವಡಿಸಿಕೊಂಡಿದ್ದಾನೆ. ಅಕ್ಕಿಕಾಳಿಗಿಂತಲೂ ಚಿಕ್ಕದಾದ ದಂತದ ಚೂರಿನ ಮೇಲೆ ಶಾಯಿಯನ್ನು ತುಂತುರು ತುಂತುರಾಗಿ ಸಿಂಪಡಿಸಿ ಲಿ ಜಿಯಾಂಗ್ ಮಿಸ್ಟ್ ಮತ್ತು ಡಾನ್ ಆನ್ ಹ್ವಾಂಗ್‌ಶಾನ್ ಮೌಂಟ್ ಎಂಬ ಹೆಸರಿನಲ್ಲಿ ಲ್ಯಾಂಡ್‌ಸ್ಕೇಪ್ ಪೇಂಟಿಂಗ್ ರಚಿಸಿದ್ದಾನೆ.

ಅಪ್ರತಿಮ ಕಲಾವಿದನಾದ ಈತ ಟಾಂಗ್ ವಂಶ ಕುರಿತಾದ ಪದ್ಯಗಳನ್ನು ಹಾಗೂ ವ್ಯಕ್ತಿಗಳನ್ನು ಕೂದಲೆಳೆಯಲ್ಲಿ ಚಿತ್ರಿಸಿದ್ದಾನೆ. ಮನುಷ್ಯನ ಕಪ್ಪು ಬಣ್ಣದ ಕೂದಲೆಳೆ ಮೇಲೆ ಈತ ಚಿತ್ರಿಸಿದ ದೊಡ್ಡ ಪಾಂಡದ ಚಿತ್ರ ಬಹಳ ಸುಂದರವಾಗಿದೆ. ಮೊಲದ ಕೂದಲನ್ನು ಬಳಸಿ, ಪಾಂಡ ಚಿತ್ರ ಮಾಡಲು ಈ ಪ್ರತಿಭಾವಂತ ತೆಗೆದುಕೊಂಡ ಕಾಲಾವಧಿ ಕೇವಲ 10 ದಿನ. ಇದನ್ನು 10,00,000 ಪಟ್ಟು ದೊಡ್ಡದಾಗಿ ಚಿತ್ರದಲ್ಲಿ ತೋರಿಸಲಾಗಿದೆ. 'ದಿ ಪೋಟ್ರೇಟ್ಸ್ ಆಫ್ 42 ಅಮೆರಿಕನ್ ಪ್ರೆಸಿಡೆಂಟ್ಸ್' ಎಂಬ ಹೆಸರಿನಲ್ಲಿ ಅಮೆರಿಕವನ್ನು ಆಳಿದ ರಾಷ್ಟ್ರಾಧ್ಯಕ್ಷರ ಚಿತ್ರಗಳನ್ನು ಈತ ಮಾನವನ ತಲೆ ಕೂದಲ ಮೇಲೆ ರಚಿಸಿದ್ದಾನೆ. ಕೇವಲ ಅರ್ಧ ಇಂಚಿಗಿಂತಲೂ ಕಡಿಮೆ ಉದ್ದದ ಬಿಳಿಕೂದಲಿನ ಮೇಲೆ ರಚಿಸಿದ ಚಿತ್ರಗಳ ಬಿಂಬಗಳು ಕರಾರುವಾಕ್ಕಾಗಿ ಮೂಡಿವೆ ಹಾಗೂ ವ್ಯಕ್ತಿಗಳ ಮುಖಭಾವ ಅತ್ಯಂತ ಸ್ಪಷ್ಟವಾಗಿದೆ. ಅತ್ಯದ್ಭುತವಾಗಿರುವ ಈ ಕೂದಲೆಳೆ ಕಲಾಕೃತಿ ವಿಶ್ವ ದಾಖಲೆಯನ್ನೂ ನಿರ್ಮಿಸಿದೆ.

■ **ವಿದ್ಯಾ ವಿ. ಹಾಲಭಾವಿ**

